132

# ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

**ಸಂ/ಸಂ**/ಹ.ಬ./ನಾ.ಕ.ಹೊ/61/2015-16 ದಿನಾಂಕ:12-04-2016

ಅರ್ಜಿದಾರರು ತಕರಾರುದಾರರು

<table>
<tr><td>1)ಬಿ.ನಾಗರಾಜ ತಂದೆ ಲೇಟ್ ಸಿದ್ದಪ್ಪ<br>ಗಾಣಾಗಟ್ಟೆ ಗ್ರಾಮ<br>ಕೂಡ್ಲಿಗಿ ತಾಲೂಕು<br>2)ಮಾಯಮ್ಮ ಗಂಡ ಲೇಟ್ ದೊಡ್ಡಹನುಮಂತಪ್ಪ<br>ಮರಿಕಟ್ಟೆ ಗ್ರಾಮ<br>ಜಗಳೂರು ತಾಲೂಕು<br>ದಾವಣಗೆರೆ ಜಿಲ್ಲಾ</td><td>1)ಎಂ.ಹೆಚ್.ರಾಮಣ್ಣ ತಂದೆ ಲೇಟ್ ಹನುಮಂತಪ್ಪ<br>2)ಪಾಪಲಿಂಗಪ್ಪ ತಂದೆ ಸಣ್ಣ ಹನುಮಂತಪ್ಪ<br>ಮರಿಕಟ್ಟೆ ಗ್ರಾಮ<br>ಜಗಳೂರು ತಾಲೂಕು<br>ದಾವಣಗೆರೆ ಜಿಲ್ಲಾ</td></tr>
<tr><td colspan="2">ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 537ಎ ವಿಸ್ತೀರ್ಣ 2-36 ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 537ಎ ವಿಸ್ತೀರ್ಣ 2-36 ಎಕ್ರೆ ಜಮೀನನ್ನು ಸದರಿ ದಾವಣಗೆರೆ ಜಿಲ್ಲಾ ಜಗಳೂರು ತಾಲೂಕು ಮರಿಕಟ್ಟೆ ಗ್ರಾಮದ ಮಾಯಮ್ಮ ಗಂಡ ಲೇಟ್ ದೊಡ್ಡ ಹನುಮಂತಪ್ಪ ಇವರಿಂದ ಸದರಿ ತಾಲೂಕು ಗಾಣಾಗಟ್ಟೆ ಗ್ರಾಮದ ಬಿ.ನಾಗರಾಜ ತಂದೆ ಲೇಟ್ ಸಿದ್ದಪ್ಪ ಇವರು ದಿನಾಂಕ 26-06-2015 ರ ಡಾಕ್ಯುಮೆಂಟ್ ನಂಬರ್: 940/2015-16 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾದಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ನಿಂಬಳಗೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 13-07-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಜಗಳೂರು ತಾಲೂಕು ಮರಿಕಟ್ಟೆ ಗ್ರಾಮದ ಎಂ.ಹೆಚ್.ರಾಮಣ್ಣ ತಂದೆ ಲೇಟ್ ಹನುಮಂತಪ್ಪ. ಪಾಪಲಿಂಗಪ್ಪ ತಂದೆ ಸಣ್ಣ ಹನುಮಂತಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್ ನಂ: 01/2015-16. ದಿನಾಂಕ: 14-08-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 22-09-2015 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ಅವರ ಪರ ನ್ಯಾಯಾವಾದಿಗಳು ಹಾಗೂ ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ನಿಂಬಳಗೇರಿ ಗ್ರಾಮದ ಸನಂ 537ಎ ವಿಸ್ತೀರ್ಣ 2-36 ಎಕ್ರೆ ಜಮೀನನ್ನು ದಾವಣಗೆರೆ ಜಿಲ್ಲಾ ಜಗಳೂರು ತಾಲೂಕು ಮರಿಕಟ್ಟೆ ಗ್ರಾಮದ ಮಾಯಮ್ಮ ಗಂಡ ಲೇಟ್ ದೊಡ್ಡ ಹನುಮಂತಪ್ಪ. ಇವರಿಂದ ಸದರಿ ತಾಲೂಕು ಗಾಣಾಗಟ್ಟೆ ಗ್ರಾಮದ ಬಿ.ನಾಗರಾಜ ತಂದೆ ಲೇಟ್ ಬಿ.ಸಿದ್ದಪ್ಪ ಇವರಿಗೆ ದಿನಾಂಕ 26-06-2015 ರ ಡಾಕ್ಯುಮೆಂಟ್ ನಂಬರ್: 940/2015-16. ರ ಪ್ರಕಾರ ರೂ:1.54.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ.

ಸದರಿ ವಿವಾದಿತ ಜಮೀನನ್ನು ಎರಡನೇ ಅರ್ಜಿದಾರಳು ಹಾಗೂ ಅವರ ಮಕ್ಕಳು ಪ್ರತಿವಾದಿಯ ವಿರುದ್ದ ಕೂಡ್ಲಿಗಿಯ ಕಿರಿಯ ಶ್ರೇಣಿ ನ್ಯಾಯಾಲಯ ಓ.ಎಸ್.ನಂಬರ್:207/2001 ರಲ್ಲಿ ಧಾವೆ ಹಾಕಿರುತ್ತಾಳೆ. ಸದರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಧಾವಾ ವಿಚಾರಣೆ ಆಗಿರುತ್ತದೆ. ಸದರಿಯವರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ನಂತರ ಅರ್ಜಿದಾರಳು ಕೇಸನ್ನು ಮುಂದುವರೆಸದೇ ಹಿಂದಕ್ಕೆ ಪಡೆದಿರುತ್ತಾರೆ. ಒಂದನೇ ಅರ್ಜಿದಾರರಾದ ಬಿ.ನಾಗರಾಜ ತಂದೆ ಲೇಟ್ ಸಿದ್ದಪ್ಪ ಇವರಿಗೆ ನೊಂದಾಯಿತ ಕ್ರಯ ಮೂಲಕ ಮಾರಾಟ ಮಾಡಿರುತ್ತಾರೆ.

ಸದರಿ ಜಮೀನು ಕಿರಿಯ ಶ್ರೇಣಿ ನ್ಯಾಯಾಲಯದ ತಿರ್ಪಿನ ಪ್ರಕಾರ ಸದರಿ ಅರ್ಜಿದಾರಳ ಭಾಗಕ್ಕೆ ಬಂದ ಜಮೀನು ಸಂಪೂರ್ಣ ಹಕ್ಕುವುಳ್ಳವಳಾಗಿದ್ದು ಇದರಲ್ಲಿ ಎದರುದಾರರಿಗೆ ಯಾವುದೇ ರೀತಿಯಿಂದ ಹಕ್ಕು ಬಾದ್ಯತೆ ಇರುವುದಿಲ್ಲ ಎರಡನೇ ಅರ್ಜಿದಾರಳು ಒಂದನೇ ಅರ್ಜಿದಾರರಿಗೆ ಸಂಪೂರ್ಣ ಕಾನೂನು ಬದ್ದವಾಗಿರುವುದರಿಂದ ಒಂದನೇ ಅರ್ಜಿದಾರರ ಪರವಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನನ್ನು ಎರಡನೇ ಅರ್ಜಿದಾರಳಾದ ಮಾಯಮ್ಮ ಗಂಡ ದೊಡ್ಡ ಹನುಮಂತಪ್ಪ ಇವರು ಬಿ.ನಾಗರಾಜ ತಂದೆ ಸಿದ್ದಪ್ಪ ಇವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಸದರಿ ಮಾಯಮ್ಮ ಇವರು ಹಿರಿಯ ಶ್ರೇಣಿ ನ್ಯಾಯಾಲಯ ಕೂಡ್ಲಿಗಿ ಓ.ಎಸ್.ನಂಬರ್: 207/2001 ರಲ್ಲಿ ಧಾವಾ ಹಾಕಿದ್ದು ಸದರಿ ಧಾವಾ ವಜಾ ಆಗಿರುತ್ತದೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಕೂಡ್ಲಿಗಿಯ ಸಿವಿಲ್ ಕೋರ್ಟ ಕಿರಿಯ ವಿಭಾಗ ಓ.ಎಸ್.ನಂಬರ್: 207/2001 ರಲ್ಲಿ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಲಾಗಿ ವಾದಿಯಾದ ಮಾಯಮ್ಮ ಇವರಿಗೆ ಸದರಿ ವಿವಾದಿತ ಜಮೀನಿನಲ್ಲಿ ಈಗಾಗಲೆ ಪಾಲು ವಿಭಾಗ ಮಾಡಿ ಕೊಂಡಿದ್ದು ಪುನಹ ಧಾವಾ ಆಸ್ಥಿಯಲ್ಲಿ ಪಾಲು ಮತ್ತು ಪ್ರತ್ಯೇಕ ಸ್ವಾದೀನತೆಗೆ ಅರ್ಜಿ ಸಲ್ಲಿಸಿರುವುದು ತಪ್ಪು ಎಂದು ಕಂಡು ಬರುತ್ತದೆ. ಅದರನ್ವಯ ಪುನಹ ಹಕ್ಕು ನೀಡಲು ಬರುವುದಿಲ್ಲವೆಂದು ಆದೇಶಿಸಿರುತ್ತಾರೆ. ಹಾಗೂ ನೊಂದಾಯಿತ ಕ್ರಯ ಪತ್ರವನ್ನು ಸ್ವೀಕರಿಸಿದ ನಂತರ ಕಂದಾಯ ನ್ಯಾಯಾಲಯದಲ್ಲಿ ಅದರ ಅನ್ವಯ ಹಕ್ಕು ಬದಲಾವಣೆಗೆ ಆದೇಶಿಸಬೇಕಾಗಿದೆ. ಕಾರಣ ತಕರಾರು ಅರ್ಜಿಯನ್ನು ತಳ್ಳಿಹಾಕಿ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ **ಕೂಡ್ಲಿಗಿ ತಾಲೂಕು** ನಿಂಬಳಗೇರಿ ಗ್ರಾಮದ ಸನಂ 537ಎ ವಿಸ್ತೀರ್ಣ 2–36 ಎಕ್ರೆ ಜಮೀನನ್ನು ದಿನಾಂಕ **26–06–2015** ರ ಡಾಕ್ಯುಮೆಂಟ್ ನಂಬರ್: 940/2015–16 ರ ಕ್ರಯ ದಸ್ತಾವೇಜು ಪ್ರಕಾರ **ಅರ್ಜಿದಾರರಾದ ಹಾಗೂ** ಕ್ರಯದಾರರಾದ ಬಿ.ನಾಗರಾಜ ತಂದೆ ಲೇಟ್ ಸಿದ್ದಪ್ಪ. ಗಾಣಾಗಟ್ಟೆ ಗ್ರಾಮ ಇವರ **ಹೆಸರಲ್ಲಿ ಹಕ್ಕ** ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

SRDesai

**ಉಪತಹಶೀಲ್ದಾರರು**
**ನಾಡಕಛೇರಿ, ಹೊಸಹಳ್ಳಿ**
**ಹೊಸಹಳ್ಳಿ**

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಿ.ನಾಗರಾಜ ತಂದೆ ಲೇಟ್ ಸಿದ್ದಪ್ಪ ಗಾಣಾಗಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು. ಮಾಯಮ್ಮ ಗಂಡ ಲೇಟ್ ದೊಡ್ಡ ಹನುಮಂತಪ್ಪ ಮರಿಕಟ್ಟೆ ಗ್ರಾಮ ಜಗಳೂರು ತಾಲೂಕು ದಾವಣಗೆರೆ ಜಿಲ್ಲಾ ಇವರ ಪರ ವಕೀಲರಾದ ಎಂ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಂ.ಹೆಚ್.ರಾಮಣ್ಣ ತಂದೆ ಲೇಟ್ ಹನುಮಂತಪ್ಪ. ಪಾಪಲಿಂಗಪ್ಪ ತಂದೆ ಸಣ್ಣ ಹನುಮಂತಪ್ಪ. ಮರಿಕಟ್ಟೆ ಗ್ರಾಮ ಜಗಳೂರು ತಾಲೂಕು ಇವರ ಪರ ವಕೀಲರಾದ ಹೆಚ್.ಗುರುರಾಜ್‌ರಾವ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.